PROCEEDINGS OF THE PUBLIC HEARING OF THE PROPOSED EXPANSION OF SUGAR CANE CRUSHING CAPACITY FROM 4,500TCD TO 7,500TCD AND INCREASE IN POWER GENERATION OF COGENERATION POWER PLANT FROM 18 MW TO 36 MW AND ESTABLISHMENT OF 60 KLPD DISTILLERY WITH INSTALLATION OF INCINERATION BOILER TO GENERATE 3 MW POWER OF M/S. SOUBHAGYA LAXMI SUGARS LTD., AT EXISTING UNIT IN HIRENANDI VILLAGE, GOKAK TALUK, BELAGAVI DISTRICT.

DATE : 19.10.2016

TIME : 11.00AM

VENUE : AT PROJECT SITE

M/s. Soubhagya Laxmi Sugars Ltd., Hirenandi–village having its corporate office at Gokak, Belgavi-Dist, Karnataka State has proposed to undertake following projects.

- Expansion of Sugar Cane Crushing capacity from 4,500TCD to 7,500TCD
- Increase in power generation of Cogeneration Power Plant from 18 MW to 36 MW.
- Establishment of 60 KLPD distillery with installation of incineration boiler to generate 3 mw power.

## DETAILS OF THE PROJECT LOCATION

Survey Numbers 413 and 443 of Hirenandi village, Gokak Taluk, Belagavi District , Karnataka State.

## OFFICERS PRESENT

The public hearing was conducted as per EIA notification of MoEF,Government of India 14-09-2006 &amendment notification 01-12-2009.

## Public Hearing Panel

| Public Hearing Panel Members Present | | |
|---|---|---|
| 1 | Shri N. Jayram, I.A.S., The Deputy Commissioner, Belgavi District. | Chairman |
| 2 | Shri. C D Kumar, Senior Environmental Officer, Zonal Office, Dharwad. | Member |
| 3 | Sri M A Maniyar, District Environmental Officer,KSPCB Regional Office,Belgavi-2 ( Chikkodi Centre) | Member |

| REPRESENTATIVES OF M/S Soubagya Laxmi Sugars Ltd.,(PROJECT PROPONENT) | | |
|---|---|---|
| 1 | Shri. Vasant Patil | Director |
| 2 | Shri. B.B.Patilgoudar | Director |
| 3 | Shri. Santosh B Chippalakatti | WTP In charge |
| 4 | Shri. Balappa. B. Shindolimath | Purchase Officer |
| 5 | Shri. Shivanand.B.Dambal | EDA consultant, EHSCPL. |
| 6 | Smt. Praveena Kumari | EHSCPL |
| 7 | Shri. Madhu Kulkarni. C | EHSCPL |

As per the Notification issued by the Ministry of Environment and Forests,Government of India on 14.09.2006 (Amendment Notification on 01-12-2009),it is a prerequisite to get Environmental Clearance from the MoEF and it is manadtory that, an Environmental Public Hearing at the project site is be held under the charmanship of Deputy Commissioner or an officer not below the rank of Additional Deputy Commissioner.

As per the State Level Expert Appraisal Committee, Government of Karnataka, Terms of Reference Letter dated:05-03-2016 and the concurrence of The Deputy Commissioner Belagavi letter dated: 03-09-2016, the Public Hearing was conducted by the Karnataka State Pollution Control Board on 19-10-2016 at the Project Site, chaired by the Deputy Commissioner Belagavi.

As per the EIA Notification, the Karnataka State Pollution Control Board gave the paper Notification 30 days in advance. The advertisement to this effect was published in the Kannada Daily Newspaper "Vijay Karnataka" and English Daily Newspaper "The Deccan Herald" dated: 20-09-2016. And in local daily Kannada Newspaper "Vishwa Vani" on 21-09-2016.

The suggestions / views / comments and objections of the interested bonafide residents, Environmental groups and others located at the Project site and are likely to be affected by the expansion were given opportunity to send their suggestions, objections, grievances, etc. Either orally or written or through E-mail to the Karnataka State Pollution Control Board / Chairman, Environment Public Hearing Committee, within 30 days from the date of publication of this notification.

The copy of the EIA draft report and Executive summary of the EIA report both in Kannada and English were placed at the following places for the references of the general public.

- Office of the Deputy Commissioner, Belagavi
- Office of the Chief Executive Officer, Zillah Panchayat, Belagavi

- District Industries and Commerce Centre, Belagavi
- The Municipal Commissioner, City Municipal Council, Gokak, Belagavi- District.
- The Gram Panchayat Office, Hirenandi village, Gokak- Taluk, Belgavi-District.
- The Senior Environmental Officer, KSPCB, Zonal Office, Dharwad
- Regional Office, Karnataka State Pollution Control Board, Belgavi-02,(Chikkodi Centre)
- Ministry of Environmental & Forests, South Zone Office, E-3/240, KendriyaSadan, $4^{th}$ floor, E&F Wings, $17^{th}$ main road, $2^{nd}$ Block, Koramangal, Bangalore.
- Help Desk, KSPCB, ParisarBhavan, Ground Floor, No.49, Church Street, Bangalore.

The Deputy Commissioner and Chairman of the Public Hearing panel Belagavi verified the notifications issued in the newspapers and ascertained whether sufficient publicity had been made as required under the statute.

The Regional office K S P C B, Belagavi-2(Chikkodi Centre) received one E-mail application till 18-10-2016.

- Suggestion letter from VootkuriSunanada Reddy, Environmentalist Nalgonad, Telangana State through mail on 18-10-2016,- Enclosed as Annexure-01.

On 19-10-2016, the day fixed for public hearing, Sri M.A. Maniyar, Environmental Officer, Karnataka State Pollution Control Board, Belagavi - 02, (Chikkodi Centre) extended a warm welcome to the Deputy Commissioner Belagavi, the Senior Environmental Officer, all the public, all the officials of different departments, elected representatives and members and the Staff of the Company who were present.

He briefly explained the need for Environmental Clearance from the Ministry of Environment and Forest, Govt. of India and the Environmental Public Hearing as per the EIA Notification, and informed that, accordingly publicity was given in the newspapers 30 days in advance and explained the procedure of the Public hearing and the documents kept for the Public Hearing. He requested the Deputy Commissioner, Chairman of the Environmental Public Hearing to preside over the Public Hearing and requested the Public to interact and to give their views/opinion about the project and to present all their submissions either in writing or orally. The proceedings will be video graphed.

On behalf of M/S Environmental Health and Safety Consultants Pvt Ltd., Bangalore, the Environmental Consultants, Sri Madhu Kulkarni. C., presented the Power Point presentation of the objectives of the proposed project, the Environmental base line data, present scenario of existing environment in the project area. The impact of the project on the environment. Environment Management Plan, measures proposed to control / mitigate the Environmental Pollution and its protection. The hard copy of the presentations made in the public Hearing is enclosed with this proceeding Enclosed as Annexure-02.

Leaders of various political parties, villagers from surrounding villages, NGOs, Students, press and other interested parties, attended the Public Hearing. List of participants, who attended the Public Hearing, is enclosed as Annexure-03.

**The Deputy Commissioner requested all the participants to submit their views and comments in writing also, if any to the Chair. In the Public hearing 09 persons expressed their views and are as stated below :**

### 1. Shri Hanumant. Duragannavar of Upparatti village.

- He informed that, from the past 20 years there were no network of roads to the villages. But, now the factory authorities constructed 2.5 Km road.
- The chairman of the industry extended the financial help for conducting the competitive examinations in the school.
- The factory authorities are giving scholarships to the deserving students and providing the employment in the industry. This is helping very much in improving the financial status of the villagers.
- They have constructed the community centres in the villages.

### 2. Shri Suresh. B. Sanadi of Mamadapur village.

- He informed that, there is a smell nuisance in the surrounding villages due to sugar industries. But, there are 20-30 villages existing in the surrounding area of the said industry but, there is no smell nuisance during the operation of the industry.
- The factory authorities have maintained good housekeeping and they have undertaken all effective air pollution control measures.
- The children of the surrounding areas inspired by the existing industry and perceiving the I.T.I. and the higher education.
- The industry is providing the employment to the qualified youths and some qualified youths are even perceiving their studies and doing jobs in abroad.
- He informed that, the farmers of the other industries are facing many problems. But, the farmers of the surrounding villages of this industry are not facing any sort of problems.
- The factory authorities are taking due care and protecting their interests.
- They have established new roads and promoting the farmers to grow more sugarcane in the surrounding area.

### 3. Shri Hanumant Yadravi of Hirenandi village.

- He informed that, the factory authorities have undertaken massive plantations in and around the factory premises and all along with the roads, by which villagers are more benefited.
- They have undertaken all the necessary precautionary measures to combat air pollution in the surrounding area.

4. **Shri. Laxman Dandin of Makkalageri village.**

- He informed that, the factory authorities provided the employment to I.T.I. and diploma holder qualified youths in their factory.
- Due to establishment of this industry their children are no required to look for the jobs in Bengaluru and Mysuru cities. The factory authorities are providing better employments to them in the industry itself.
- Since the industry is located at close proximity, it is very easy for them to transport the sugarcane.
- In view of the above advantages, he requested, the Deputy Commissioner to accord permission to expansion project.

5. **Shri. Ramkrishna Mannikeri of Chikknandi village.**

- He informed that, the unemployment problem is reduced in the surrounding villages since the commissioning of this industry and still he desires to reduce this unemployment problem to a greater extent.

6. **Shri. Ramappa Naik of Panchanayakanahatti village.**

- He informed that, since the industry is located close to villages it has benefited more to them.
- The factory authorities supplying the Bio-Compost manure at subsidy rate to the farmers, which has substantially benefited to increase the yield of the sugarcane.

7. **Shri. Shivarai Dandin of Makkalageri village.**

- He informed that, due to the existing industry, the surrounding villagers are getting more benefits from different way and means.
- The factory authorities are imparting requisite training to the qualified youths and providing the employment in their industry. This has helped them to improve their economic status and coming future.

8. **Shri. Mutteppa Beeranagaddi of Benachinamardi village.**

- He stated that, the industry is not causing any ill effects in the surrounding area.
- The surrounding villagers are highly benefited from this industry.
- The factory authorities constructed the roads and they are promoting the farmers to grow more sugarcane in the surrounding area.
- Since, the establishment of this industry the unemployment problem reduced to a great extent.

9. **Shri. Ashok Nesaragi of Mamadapur village.**

- He informed that, the villagers not incurred any losses from the industry; on the contrary they are getting more advantages and benefits from the unit.
- The factory authorities supplying the Bio-Compost manure at subsidy rate to the farmers,

which has substantially benefited to increase in the yield of the sugarcane.

**The Deputy Commissioner sought the clarification on the following issues.**

- Measures proposed to prevent the contamination of the Nala flowing near the factory.

**Clarification:**

1. The environmental consultant informed that, the modern technology effluent treatment plant will be established to treat the trade waste generated from the industry to meet the required norms.
2. The treated trade waste is completely utilized for irrigation purpose and for the development of green belt. There will be no discharge of any kind of waste in to the Nala.

SHRI. N JAYARAM, I A S, THE DEPUTY COMMISSIONER, BELAGAVI HAS SUMMED UP THE PROCEEDINGS AFTER PERUSING THE DOCUMENTATION, LISTENING TO THE PUBLIC AND RECORDING, WHAT IS IN PUBLIC INTEREST AS UNDER.

- The demands, views, grievances & suggestions submitted by the local people in the public hearing meeting will be viewed seriously.
- To undertake stringent dust control measures & dust suppression system to combat the dust emissions generated during the operations. The emission levels in the surrounding areas shall be maintained well below the stipulated standards
- KSPCB shall ensure that the project proponents adopt the best available technologies in revelation & control of the emissions. The stack & Ambient Air Quality monitoring values are to be maintained within the stipulated standards
- Rain water harvesting and water shed management plan should be implemented
- The Company has provide employment, education, health facilities and other amenities as promised by them and in case of any violations shall be viewed seriously and appropriate action shall be taken
- The company will ensure the zero discharge from the plant which ensure that, there will be no contamination of the water bodies during the process
- The company will undertake Socio-economic development schemes and programs in the surrounding villages

- The CSR coasting should be as per actual and should not include a separate line item, etc for deliberate buffering to take care of inflation in the CSR time bound action plan submitted. Also, wherever explicitly increase in contribution or execution has been delineated with regards to inflation year on year on a compounding bases, this has to be scrupulously followed and in this CSR should not include existing item/Assets. The action plan includes implementation after public hearing report submission date.
- Plantation of tress in factory and nearby areas-10000 sampling per year over next 5 years and maintained the green belt, and maintain the tress in association with gram panchayat and Forest department
- The appeals, suggestions, complaints and grievances of the public have been recorded through video and same would be made into CDs and the proceedings of the meeting, as it has to sent to the Ministry of Environment, Forests and Climate change, Government of India for further action.

Based on the remarks and views received from the public, who have attended the environmental public hearing, the recommendation will be sent to Ministry of Environment, Forests & Climate Change, Government of India, while considering permission to proposed projects with conditions that the project proponents shall take all precautionary measures during the establishment and operation of the Unit by following guidelines / norms / conditions / directions / standard stipulated by Karnataka State pollution Control Board and Ministry of Environment & Forest, Government of India and other competent authorities.

At the outset Shri M A Maniyar. Environment Officer, KSPCB, Regional office Belagavi-2( Chikkodi Center) has extended his thanks to Deputy Commissioner, Belagvi, Other Departmental Officers, management, Staff of industry He also extended his thanks to the public, other dignitaries, Press, Police personnel for the support extended during the course of the public hearing and concluded the meeting.

(N Jayaram., I.A.S.)
Deputy Commissioner & Chairman,
Environmental Public Hearing Committee,
Belagavi, Karnataka.

**ಮೆ: ಸೌಭಾಗ್ಯ ಲಕ್ಷ್ಮಿ ಶುಗರ್ಸ ಲಿಮಿಟೆಡ್, ಇವರು ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕು, ಹಿರೇನಂದಿ ಗ್ರಾಮದ ಸರ್ವೇ ನಂ. 413 ಮತ್ತು 443ರಲ್ಲಿ, ಸ್ಥಾಪಿತಗೊಂಡಿರುವ ಸಕ್ಕರೆ ಕಾರ್ಖಾನೆಯ ಕಬ್ಬು ನುರಿಸುವ ಉತ್ಪಾದನಾ ಸಾಮರ್ಥ್ಯವನ್ನು 4,500 ಟಿಸಿಡಿ ಯಿಂದ 7,500 ಟಿಸಿಡಿಗೆ ಮತ್ತು ಸಹ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು 18 ಮೆ.ವ್ಯಾ ನಿಂದ 36 ಮೆ.ವ್ಯಾಗೆ ಹೆಚ್ಚಿಸಲು ಹಾಗೂ 60 ಕೆ.ಎಲ್.ಪಿ.ಡಿ. ಡಿಸ್ಟಿಲರಿ ಘಟಕ ಮತ್ತು 03 ಮೆ.ವ್ಯಾ ಇನ್ಸಿನರೇಶನ್ ಬಾಯ್ಲರ್‌ನ ಸ್ಥಾಪನೆಯ ಕುರಿತು ಕರೆಯಲಾದ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಕೆಗಳು**

ದಿನಾಂಕ : **19/10/2016**

ಸಮಯ : **11.00 ಗಂಟೆ ಬೆಳಿಗ್ಗೆ**

ಸ್ಥಳ : **ಯೋಜನೆಯ ಸ್ಥಳದಲ್ಲಿ**

- **ಮೆ: ಸೌಭಾಗ್ಯ ಲಕ್ಷ್ಮಿ ಶುಗರ್ಸ ಲಿಮಿಟೆಡ್,** ಈ ಸಂಸ್ಥೆಯು ತನ್ನ ಸಮುದಾಯಿ ಕಛೇರಿಯನ್ನು ಗೋಕಾಕ, ಬೆಳಗಾವಿ ಜಿಲ್ಲೆ ಕರ್ನಾಟಕ ರಾಜ್ಯ ಸ್ಥಳದಲ್ಲಿ ಹೊಂದಿದ್ದು ಹಾಗು ಇದು ಈ ಕೆಳಗಿನ ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಿರುತ್ತಾರೆ.
- ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಹೀರೆನಂದಿ ಗ್ರಾಮದಲ್ಲಿ ಕಬ್ಬು ನುರಿಸುವ ಉತ್ಪಾದನಾ ಸಾಮರ್ಥ್ಯವನ್ನು 4,500 ಟಿಸಿಡಿ ಯಿಂದ 7,500 ಟಿಸಿಡಿಗೆ ಮತ್ತು ಸಹ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು 18 ಮೆ.ವ್ಯಾ ನಿಂದ 36 ಮೆ.ವ್ಯಾಗೆ ಹೆಚ್ಚಿಸುವದು ಹಾಗೂ 60 ಕೆ.ಎಲ್.ಪಿ.ಡಿ. ಡಿಸ್ಟಿಲರಿ ಘಟಕ ಮತ್ತು 03 ಮೆ.ವ್ಯಾ. ಇನ್ಸಿನರೇಶನ್ ಬಾಯ್ಲರ್‌ನ ಸ್ಥಾಪಿಸುವದು.

<u>**ಯೋಜನೆ ಸ್ಥಳದ ವಿವರಗಳು:-**</u>

- ಈ ಯೋಜನೆಯನ್ನು ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ಸರ್ವೆ ನಂ. 413 ಮತ್ತು 443, ಹೀರೆನಂದಿ ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಕ್ಕರೆ ಕಾರಖಾನೆಯ ಕಬ್ಬು ನುರಿಸುವ ಉತ್ಪಾದನಾ ಸಾಮರ್ಥ್ಯವನ್ನು 4,500 ಟಿಸಿಡಿ ಯಿಂದ 7,500 ಟಿಸಿಡಿಗೆ ಮತ್ತು ಸಹ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು 18 ಮೆ.ವ್ಯಾ ನಿಂದ 36 ಮೆ.ವ್ಯಾಗೆ ಹೆಚ್ಚಿಸುವದು ಹಾಗೂ 60 ಕೆ.ಎಲ್.ಪಿ.ಡಿ. ಡಿಸ್ಟಿಲರಿ ಘಟಕ ಮತ್ತು 03 ಮೆ.ವ್ಯಾ. ಇನ್ಸಿನರೇಶನ್ ಬಾಯ್ಲರ್‌ನ ಸ್ಥಾಪಿಸುವದು.

**-: ಸಭೆಗೆ ಹಾಜರಿದ್ದ ಅಧಿಕಾರಿಗಳು :-**

ಸದರ ಸಾರ್ವಜನಿಕ ವಿಚಾರಣಾ ಸಭೆಯನ್ನು ಪರಿಸರ ಸಂರಕ್ಷಣ ಹಾಗು ಅರಣ್ಯ ಸಚಿವಾಲಯ ಭಾರತ ಸರ್ಕಾರದ ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14-09-2016 ರ ತಿದ್ದು ಪಡಿ ದಿನಾಂಕವು 01-12-2009 ರ ಮೇರೆಗೆ ಜರುಗಿಸಲಾಯಿತು.

-: ಸಾರ್ವಜನಿಕ ವಿಚಾರಣಾ ಮಂಡಳಿ :-

ಹಾಜರಿದ್ದ ಸಾರ್ವಜನಿಕ ವಿಚಾರ ಮಂಡಳಿ ಸದಸ್ಯರು

| | |
|---|---|
| ಶ್ರೀ ಎನ್. ಜಯರಾಮ, ಭಾ.ಆ.ಸೇ., ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ. | ಅಧ್ಯಕ್ಷರು. |
| ಶ್ರೀ. ಸಿ.ಡಿ.ಕುಮಾರ, ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಲಯ ಕಛೇರಿ, ಧಾರವಾಡ. | ಸದಸ್ಯರು |
| ಶ್ರೀ ಎಮ್. ಎ. ಮನಿಯಾರ, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ – 2 (ಚಿಕ್ಕೋಡಿ ಕೇಂದ್ರ). | ಸದಸ್ಯರು |

| ಮೆ : ಶ್ರೀ ಸೌಭಾಗ್ಯ ಲಕ್ಷ್ಮೀ ಶುಗರ್ಸ ಲಿಮಿಟೆಡ್, ಸಂಸ್ಥೆಯ ಪ್ರತಿನಿಧಿಗಳು (ಯೋಜನೆಯ ಪ್ರತಿಪಾದಕರು) | | |
|---|---|---|
| 1 | ಶ್ರೀ. ವಸಂತ ಪಾಟೀಲ | ನಿರ್ದೇಶಕರು |
| 2 | ಶ್ರೀ. ಬಿ. ಬಿ. ಪಾಟೀಲಗೌಡರ | ನಿರ್ದೇಶಕರು |
| 3 | ಶ್ರೀ. ಸಂತೋಷ. ಬಿ. ಚಿಪ್ಪಲಕಟ್ಟಿ | WTP ಉಸ್ತುವಾರಿ |
| 4 | ಶ್ರೀ. ಬಾಳಪ್ಪಾ. ಬಿ. ಶಿಂದೊಳಿಮಠ. | ಖರೀದಿ ಅಧಿಕಾರಿ |
| 5 | ಶ್ರೀ. ಶಿವಾನಂದ. ಬಿ. ಡಂಬಳ | ಸಲಹೆಗಾರರು, EHSCPL |
| 6 | ಶ್ರೀಮತಿ. ಪ್ರವೀಣಾ ಕುಮಾರಿ | EHSCPL |
| 7 | ಶ್ರೀ. ಮಧು ಕುಲಕರ್ಣಿ. ಸಿ. | EHSCPL |

ಕೇಂದ್ರ ಪರಿಸರ ಹಾಗೂ ಅರಣ್ಯ ಮಂತ್ರಾಲಯದ ಭಾರತ ಸರ್ಕಾರದ ಪರಿಸರ ಆಘಾತ ಅಧ್ಯಯನದ ಅಧಿಸೂಚನೆಯ ದಿನಾಂಕ:14-09-2006 (ತಿದ್ದುಪಡಿ ಅಧಿಸೂಚನೆ ದಿನಾಂಕ : 01-12-2009) ರ ಪ್ರಕಾರ ಪರಿಸರ ವಿಮೋಚನಾ ಪತ್ರವನ್ನು ನೀಡುವ ಮುಂಚೆ ಸಾರ್ವಜನಿಕ ಆಲಿಕೆಯನ್ನು ನಿರ್ಧರಿಸಿದ ಯೋಜನೆಯ ಸ್ಥಳದಲ್ಲಿ ಜರುಗಿಸುವುದು ಕಡ್ಡಾಯವಾಗಿರುತ್ತದೆ ಹಾಗೂ ಇದನ್ನು ಮಾನ್ಯ ಜಿಲ್ಲಾಧಿಕಾರಿಗಳು ಅಥವಾ ಇತರೆ ಹೆಚ್ಚುವರಿ ಜಿಲ್ಲಾಧಿಕಾರಿಗಳವರ ಹುದ್ದೆಗಿಂತ ಕೆಳಗಿರದಂತಹ ಅಧಿಕಾರಿಗಳ ಸಭಾಧ್ಯಕ್ಷತೆಯಲ್ಲಿ ಜರುಗತಕ್ಕದು.

ರಾಜ್ಯ ಮಟ್ಟದ ಅಫ್ರೈಸಲ್ ತಜ್ಞರ ಸಮಿತಿ, ಕರ್ನಾಟಕ, ಇವರ Terms of reference ಪತ್ರದ ದಿನಾಂಕ: 05-03-2016ರಂತೆ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ, ಇವರ ಪತ್ರದ ದಿನಾಂಕ: 03-09-2016ರಂದು ಸಮ್ಮತಿಸಿರುವ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆಯನ್ನು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವತಿಯಿಂದ ದಿನಾಂಕ:- 19/10/2016 ರಂದು ಮಾನ್ಯ ಜಿಲ್ಲಾಧಿಕಾರಿಗಳು ಬೆಳಗಾವಿ ಇವರ ಸಭಾಧ್ಯಕ್ಷತೆಯಲ್ಲಿ ಯೋಜನಾ ಸ್ಥಳದಲ್ಲಿ ಪರಿಸರ ಕುರಿತು ಸಾರ್ವಜನಿಕಾ ವಿಚಾರಣಾ ಸಭೆಯನ್ನು ಜರುಗಿಸಲಾಯಿತು.

ಪರಿಸರ ಆಘಾತ ಆಧ್ಯಯನದ ಅಧಿಸೂಚನೆ ದಿನಾಂಕ: 14-09-2006ರ (ತಿದ್ದುಪಡಿ ದಿನಾಂಕ:01-12-2009) ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರಿಂದ 30 ದಿನಗಳ ಮುಂಚಿತ ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಸದರಿ ಪ್ರಕಟಣೆಯನ್ನು ರಾಜ್ಯದಲ್ಲಿ ಪ್ರಚಲಿತವಿರುವ **"ವಿಜಯ ಕರ್ನಾಟಕ"** ಕನ್ನಡ ದಿನಪತ್ರಿಕೆಯಲ್ಲಿ ಹಾಗೂ ರಾಷ್ಟ್ರ ಮಟ್ಟದಲ್ಲಿ ಪ್ರಚಲಿತವಿರುವ **"The Deccan Herald"** ಆಂಗ್ಲ ದಿನಪತ್ರಿಕೆಯಲ್ಲಿ ದಿನಾಂಕ:- 20/09/2016ರಂದು ಹಾಗೂ ಜಿಲ್ಲೆಯಲ್ಲಿ ಪ್ರಚಲಿತವಿರುವ ಸ್ಥಳಿಯ ಕನ್ನಡ ದಿನಪತ್ರಿಕೆಯಾದ **"ವಿಶ್ವ ವಾಣಿ"**ದಲ್ಲಿ ದಿನಾಂಕ:- 21/09/2016 ರಂದು ಪ್ರಕಟಣೆಯನ್ನು ನೀಡಲಾಗಿದೆ.

ಯೋಜನಾ ಸ್ಥಳದಲ್ಲಿರುವ ಹಾಗೂ ಸದರಿ ಯೋಜನೆಯಿಂದ ಪರಿಣಾಮಕ್ಕೆ ಒಳಗಾಗಬಹುದಾದ ರಹವಾಸಿಗಳು ಪರಿಸರ ಗುಂಪುಗಳು, ಹಾಗೂ ಇತರರ ಸಲಹೆ ಅಭಿಪ್ರಾಯ ಹಾಗೂ ಆಕ್ಷೆಪಣೆಗಳನ್ನು ಮೌಖಿಕವಾಗಿ ಅಥವಾ ಲಿಖಿತದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಥವಾ ಅಧ್ಯಕ್ಷರು ಸಾರ್ವಜನಿಕ ವಿಚಾರಣಾ ಸಮಿತಿ ಇವರಿಗೆ ಅಧಿಸೂಚನೆ ಪ್ರಕಟಣೆಯಾದ ದಿನಾಂಕ ದಿಂದ 30 ದಿನಗಳ ಒಳಗಾಗಿ ಮಂಡಿಸಲು ಅವಕಾಶವನ್ನು ನೀಡಲಾಗಿತ್ತು.

ತ್ವರಿತ ಪರಿಸರ ಆಘಾತ ಅಂದಾಜೀಕರಣದ ಕರಡು ವರದಿಯ ಪ್ರತಿಯನ್ನು ಹಾಗೂ ತ್ವರಿತ ಪರಿಸರ ಆಘಾತ ಅಂದಾಜೀಕರಣದ ಕರಡು ವರದಿಯ ಸಾರಾಂಶವನ್ನು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ಸಾರ್ವಜನಿಕರ ಪರಾವಿರ್ಷನೆಗೆ ಹಾಗೂ ಮಾಹಿತಿಗಾಗಿ ಈ ಕೆಳಗೆ ನಮೂದಿಸಿದ ಸ್ಥಳಗಳಲ್ಲಿ ಇಡಲಾಗಿತ್ತು.

- ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ.
- ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ, ಜಿಲ್ಲಾ ಪಂಚಾಯತ ಬೆಳಗಾವಿ ಇವರ ಕಾರ್ಯಾಲಯ.
- ಜಿಲ್ಲಾ ಕೈಗಾರಿಕಾ ಕೇಂದ್ರ ಬೆಳಗಾವಿ.
- ನಗರಸಭೆ ಕಾರ್ಯಾಲಯ, ಗೋಕಾಕ, ಬೆಳಗಾವಿ ಜಿಲ್ಲೆ.
- ಗ್ರಾಮ ಪಂಚಾಯತ ಕಾರ್ಯಾಲಯ, ಹೀರೆನಂದಿ ಗ್ರಾಮ.
- ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಲಯ ಕಛೇರಿ, ಧಾರವಾಡ.
- ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಳಗಾವಿ-02 (ಚಿಕ್ಕೊಂಡಿ ಕೇಂದ್ರ).
- ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯ,ದಕ್ಷಿಣ ವಲಯ ಕಛೇರಿ ನಂ ಇ-3/240,ಕೇಂದ್ರೀಯ ಸದನ,4ನೇ ಮಹಡಿ,ಇ ಮತ್ತು ಎಫ್ ವಿಂಗ್ಸ ಮುಖ್ಯ ರಸ್ತೆ,17 ನೇ ಮುಖ್ಯ ರಸ್ತೆ,2ನೇ ಬ್ಲಾಕ ಕೋರಮಂಗಳ,ಬೆಂಗಳೂರು.
- ಸಹಾಯ ಕೇಂದ್ರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ,ನೆಲ ಅಂತಸ್ತು,ನಂ.49,ಪರಿಸರ ಭವನ ಚರ್ಚ್‌ಸ್ಟ್ರೀಟ,ಬೆಂಗಳೂರು.

➢ **ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಸಭಾಧ್ಯಕ್ಷರು, ಬೆಳಗಾವಿ, ಇವರು ಸಾರ್ವಜನಿಕ ಆಲಿಕೆ ಪಟ್ಟಿ, ಜಾಹೀರಾತುಗಳಲ್ಲಿ ನೀಡಿದ ಎಲ್ಲ ಅಧಿಸೂಚನೆಗಳನ್ನು ಕೂಲಕುಂಷವಾಗಿ ಪರಿಶೀಲಿಸಿ ಇವುಗಳು ಸಮರ್ಪಕ ಪ್ರಕಟಣೆಯಾಗಿದೆಯೋ ಹೇಗೆ ಎಂಬುದನ್ನು ಅವಲೋಕಿಸಿದರು ಹಾಗೂ ಇದು ಕಾನೂನಿನ ಅಧಿನಿಯಮಾನುಸಾರವಾಗಿದೆಯೋ ಹೇಗೆ ಎಂಬುದನ್ನು ಪರಿಶೀಲಿಸಿದರು.**

ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಳಗಾವಿ-02(ಚಿಕ್ಕೋಡಿ ಕೇಂದ್ರ) ಇವರಲ್ಲಿ ದಿನಾಂಕ:-18-10-2016 ರವರೆಗೆ ಒಂದು ಈ-ಮೇಲ್ ಅರ್ಜಿಯು ಸ್ವೀಕೃತವಾಗಿರುತ್ತದೆ. ಅವುಗಳ ವಿವರ ಈ ಕೆಳಗಿನಂತಿವೆ.

1. **ಶ್ರೀ. ಸುನಂದಾ ರೆಡ್ಡಿ,** ಪರಿಸರವಾದಿಗಳು ನಾಲಗೌಡಾ ಜಿಲ್ಲೆ ತೆಲಾಂಗನ ರಾಜ್ಯ ಇವರಿಂದ ದಿನಾಂಕ: 18/10/2016, ಇದರ ಪ್ರತಿಯನ್ನು **ಅನುಬಂಧ-1**ರ ಮೂಲಕ ಲಗತ್ತಿಸಲಾಗಿದೆ.

ದಿನಾಂಕ:- 19/10/2016 ರಂದು ಜರುಗಿಸಿದ ಸಾರ್ವಜನಿಕ ವಿಚರಣಾ ಸಭೆಗೆ ಆಗಮಿಸಿದ ಜಿಲ್ಲಾಧಿಕಾರಿಗಳು ಬೆಳಗಾವಿ, ಸಾರ್ವಜನಿಕರು, ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳ, ಚುನಾಯಿತ ಪ್ರತಿನಿಧಿಗಳು ಹಾಗೂ ಸಂಸ್ಥೆಯ ಪದಾದಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ **ಶ್ರೀ. ಎಮ್. ಎ. ಮನಿಯಾರ, ಪರಿಸರ ಅಧಿಕಾರಿಗಳು** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಾರ್ಯಾಲಯ ಬೆಳಗಾವಿ - 2 (ಚಿಕ್ಕೋಡಿ ಕೇಂದ್ರ). ಬೆಳಗಾವಿ ಇವರು ಆತ್ಮಿಯವಾಗಿ ಸ್ವಾಗತಿಸಿದರು ಸದರಿಯವರು ಪರಿಸರ ಹಾಗೂ ಅರಣ್ಯ ಸಚಿವಾಲಯ ಭಾರತ ಸರ್ಕಾರ ಹಾಗೂ ಈಐವಿ ಅಧಿಸೂಚನೆ ಪ್ರಕಾರ ಸಾರ್ವಜನಿಕ ವಿಚಾರಣೆಯ ಅವಶ್ಯಕತೆ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು. ಈ ಬಗ್ಗೆ 30 ದಿನಗಳ ಮುಂಚಿತವಾಗಿ ಪ್ರಕಟಣೆಯನ್ನು ನೀಡಲಾಗಿತ್ತು ಎಂದು ಹಾಗೂ ಸಾರ್ವಜನಿಕ ವಿಚಾರಣೆಯ ನಿಯಮಾವಳಿ ಬಗ್ಗೆ ವಿವರಗಳನ್ನು ನೀಡಿದರು. ಸದರಿಯವರು ಜಿಲ್ಲಾದಿಕಾರಿಗಳಿಗೆ ಸಭೆಯ ಅಧ್ಯಕ್ಷತೆಯನ್ನು ವಹಿಸಲು ಕೊರಿದರು ಹಾಗೂ ಸಾರ್ವಜನಿಕರಿಗೆ ಯೋಜನೆಯ ಬಗ್ಗೆ ತಮ್ಮ ಅಭಿಪ್ರಾಯ ಹಾಗೂ ವಿಚಾರಗಳನ್ನು ಮೌಖಿಕವಾಗಿ ಅಥವಾ ಲಿಖಿತದಲ್ಲಿ ಮಂಡಿಸಲು ಕೊರಿದರು. ಸಭೆಯ ನಡುವಳಿಗಳನ್ನು ವಿಡಿಯೋ ಗ್ರಾಪ ಮಾಡಲಾಗುವುದು ಎಂದು ವಿವರಿಸಿದರು.

ಮೇ!! **Environmental Health and Safety Consultants Pvt Ltd.,** ಸಂಸ್ಥೆಯ **ಪರಿಸರ ತಜ್ಞರಾದ ಶ್ರೀ. ಮಧು ಕುಲಕರ್ಣಿ. ಸಿ.,** ಇವರು ಕನ್ನಡದಲ್ಲಿ ನಿಯೋಜಿತ ಯೋಜನೆಯ ಉದ್ದೇಶಗಳ ಬಗ್ಗೆ Power Point Presentation ಮೂಲಕ ವಿವರಗಳನ್ನು ನೀಡಿದರು. ಸದರಿಯವರು ಯೋಜನಾ ಪ್ರಸಕ್ತ ಪ್ರದೇಶದಲ್ಲಿರುವ ಪ್ರಸ್ತುತ ಪರಿಸರ ದೃಶ್ಯ, ಸದರಿ ಯೋಜನೆಯಿಂದ ಪರಿಸರದ ಮೇಲೆ ಆಗಬಹುದಾದ ಪರಿಣಾಮ, ಪರಿಸರ ವ್ಯವಸ್ಥಾಪನೆ ಯೋಜನೆ, ಪರಿಸರ ಮಾಲಿನ್ಯವನ್ನು ನಿಯಂತ್ರಿಸಲು ರೂಪಿಸಿದ ಕ್ರಮಗಳು ಇತ್ಯಾದಿಗಳ ಬಗ್ಗೆ ವಿವರಗಳನ್ನು ಮಂಡಿಸಿದರು. **ಇವುಗಳ ಹಾರ್ಡಕಾಪಿಯನ್ನು ಅನುಂಬಂಧ - 2 ರ ಮೂಲಕ ಲಗತ್ತಿಸಲಾಗಿದೆ.**

ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಸುತ್ತಮುತ್ತಲಿನ ಗ್ರಾಮಸ್ಥರು, ಸರ್ಕಾರ ಸಂಘ ಸಂಸ್ಥೆಗಳು, ವಿದ್ಯಾರ್ಥಿಗಳು, ಪತ್ರ-ಕರ್ತರು, ಹಾಗೂ ಆಸಕ್ತಿ ಹೊಂದಿದ ಇತರರು ಸದರಿ ಸಭೆಯಲ್ಲಿ ಭಾಗ ವಹಿಸಿದ್ದರು. **ಸಭೆಯಲ್ಲಿ ಭಾಗವಹಿಸಿದವರ ಯಾದಿಯನ್ನು ಅನುಬಂಧ-3 ಹಂತ ಲಗತ್ತಿಸಲಾಗಿದೆ.** ಜಿಲಾಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದವರು ತಮ್ಮ ಅಭಿಪ್ರಾಯವನ್ನು ಲಿಖಿತ ರೂಪದಲ್ಲಿಯೂ ನೀಡಬಹುದೆಂದು ಸೂಚಿಸಿದರು.

ಸಾರ್ವಜನಿಕ ವಿಚಾರಣೆಯ ಕಾಲಕ್ಕೆ 09 ಜನರು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದರು ಮತ್ತು ಕಾರ್ಖಾನೆಯವರು ಅದಕ್ಕೆ ತಕ್ಕಂತೆ ಸ್ಪಷ್ಟನೆ ನೀಡಿದ್ದು. ಅದರ ವಿವರಗಳು ಈ ಕೆಳಗಿನಂತಿವೆ.

1. ಶ್ರೀ. ಹನುಮಂತ. ದುರಗನ್ನವರ, ಉಪ್ಪಾರಟ್ಟಿ.

- ಸುಮಾರು 20 ವರ್ಷಗಳಿಂದ ನಮ್ಮ ಹಳ್ಳಿಗಳಿಗೆ ಸೂಕ್ತವಾದ ರಸ್ತೆ ವ್ಯವಸ್ಥೆ ಇರಲಿಲ್ಲ. ಆದರೆ ಕಾರ್ಖಾನೆಯವರು ನಮಗೆ 2.5 ಕೀ.ಮಿ. ರಸ್ತೆಯನ್ನು ನಿರ್ಮಾಣ ಮಾಡಿ ಕೊಟ್ಟಿದ್ದಾರೆ.
- ಶಾಲೆಯಲ್ಲಿ ಸ್ಪರ್ಧಾತ್ಮಕ ಪರಿಕ್ಷೇಗಳನ್ನು ನಡೆಸಲು ಸಹಾಯ ಕೋರಿದಾಗ ಕಾರ್ಖಾನೆಯ ಅಧ್ಯಕ್ಷರು ನಮಗೆ ತುಂಬಾ ಸಹಾಯ ಮಾಡಿದ್ದಾರೆ.
- ನಮ್ಮ ಮಕ್ಕಳಿಗೆ ವಿದ್ಯಾರ್ಥಿ ವೇತನಗಳನ್ನು ನೀಡುತಿದ್ದಾರೆ ಹಾಗೂ ಕಾರ್ಖಾನೆಯಲ್ಲಿ ನೌಕರಿಗಳನ್ನು ಒದಗಿಸಿ ಆರ್ಥಿಕವಾಗಿ ತುಂಬಾ ಅನುಕೂಲವನ್ನು ಮಾಡಿ ಕೊಟ್ಟಿದ್ದಾರೆ.
- ನಮ್ಮ ಅಕ್ಕ ಪಕ್ಕದ ಹಳ್ಳಿಗಳಲ್ಲಿ ಸಮುದಾಯ ಭವನಗಳನ್ನು ನಿರ್ಮಿಸಿದ್ದಾರೆ.

2. ಶ್ರೀ ಸುರೇಶ. ಬಿ. ಸನದಿ, ಮುಮದಾಪುರ.

- ಬೇರೆ ಕಡೆ ಎಲ್ಲಿಯೂ ಹೊದರು, ಕಬ್ಬು ನುರಿಸುವಾಗ ತುಂಬಾ ವಾಸನೆ ಬರುತ್ತದೆ. ಕಾರ್ಖಾನೆ ಇನ್ನೂ 10–20 ಕೀ.ಮಿ. ದೂರದಲ್ಲಿ ಇರುವಾಗಲೇ, ಕಾರ್ಖಾನೆಯು ಸಮೀಪದಲ್ಲಿಯೇ ಇದೆ ಅಂತಾ ವಾಸನೆಯಿಂದ ತಿಳಿಯುತ್ತದೆ. ಇಲ್ಲಿ ಅಕ್ಕ ಪಕ್ಕದಲ್ಲಿ 20–30 ಹಳ್ಳಿಗಳಿವೆ. ಆದರೆ ಇಲ್ಲಿ ಆ ರೀತಿಯ ಯಾವುದೇ ತೊಂದರೆಗಳು ಇರುವುದಿಲ್ಲ. ಕಾರ್ಖಾನೆಯವರು ಕಾರ್ಖಾನೆಯನ್ನು ತುಂಬಾ ಸ್ವಚ್ಛವಾಗಿ ಇಟ್ಟುಕೊಂಡಿದ್ದಾರೆ ಮತ್ತು ವಾಯು ಮಾಲಿನ್ಯವಾಗದಂತೆ ತುಂಬಾ ಸೂಕ್ತ ಕ್ರಮಗಳನ್ನು ಅಳವಡಿಸಿರುತ್ತಾರೆ.
- ನಮ್ಮ ಮಕ್ಕಳು ಕಾರ್ಖಾನೆಯಾಗುವುದರಿಂದ ಪ್ರೊತ್ಸಾಹಿತರಾಗಿ I.T.I. ಮಾಡಿದರು. ಅದಕ್ಕೆ ತಕ್ಕಂತೆ ಕಾರ್ಖಾನೆಯವರು ಅವರಿಗೆ ನೌಕರಿ ಕೂಡ ಒದಗಿಸಿ ತುಂಬಾ ಅನುಕೂಲ ಮಾಡಿ ಕೊಟ್ಟಿದ್ದಾರೆ ಹಾಗೂ ಇನ್ನೂ ಕೆಲ ವಿದ್ಯಾವಂತರು ಇಲ್ಲಿ ವ್ಯಾಸಂಗವನ್ನು ಮಾಡಿ ವಿದೇಶಗಳಲ್ಲಿ ಕಾರ್ಯ ನಿರ್ವಹಿಸುತಿದ್ದಾರೆ.
- ಬೇರೆ ಕಡೆ ರೈತರ ಬೆಳೆಗಳಿಗೆ ತುಂಬಾ ತೊಂದರೆಯಾಗುತ್ತದೆ. ಆದರೆ ಇಲ್ಲಿ ಆ ರೀತಿಯ ಯಾವುದೇ ತರಹದ ತೊಂದರೆಗಳಾಗಿರುವದಿಲ್ಲ. ಈ ದಿಸೆಯಲ್ಲಿ ಕಾರ್ಖಾನೆಯವರು ತುಂಬಾ ಕಾಳಜಿಯನ್ನು ವಹಿಸುತ್ತಾರೆ.
- ಹೊಸ ಹೊಸ ರಸ್ತೆಗಳನ್ನು ನಿರ್ಮಿಸುತಿದ್ದಾರೆ ಹಾಗೂ ಉತ್ತಮ ರೀತಿಯಲ್ಲಿ ಕಬ್ಬು ಬೆಳೆಯಲು ತುಂಬಾ ಪ್ರೊತ್ಸಾಹಿಸಿದ್ದಾರೆ.

3. ಶ್ರೀ ಹನುಮಂತ ಯಡ್ರಾವಿ, ಹೀರೆನಂದಿ.

- ಕಾರ್ಖಾನೆಯ ಸುತ್ತ ಮುತ್ತಲು ಹಾಗೂ ನಮ್ಮೂರಿನ ರಸ್ತೆಗಳ ಅಕ್ಕ ಪಕ್ಕದಲ್ಲಿ ಗಿಡ ಮರಗಳನ್ನು ಬೆಳೆಸಲು ತುಂಬಾ ಅನುಕೂಲ ಮಾಡಿಕೊಟ್ಟಿದ್ದಾರೆ. ಮತ್ತು ವಾಯು ಮಾಲಿನ್ಯ ಆಗದಂತೆ ಕ್ರಮಗಳನ್ನು ಕೈಗೊಂಡಿದ್ದಾರೆ.

4. ಶ್ರೀ ಲಕ್ಷ್ಮಣ. ದಂಡಿನ, ಮೆಕ್ಕಳಗಿರಿ.

- I.T.I. ಮತ್ತು Diploma ಮಾಡಿದ ನಮ್ಮ ಮಕ್ಕಳಿಗೆ ಒಳ್ಳೆಯ ನೌಕರಿ ಕೊಡುವ ಮೂಲಕ ತುಂಬಾ ಸಹಾಯ ಮಾಡಿದ್ದಾರೆ.
- ಕಾರ್ಖಾನೆ ಸ್ಥಾಪನೆಯಾಗುವದರಿಂದ ನಮ್ಮ ಮಕ್ಕಳು ನೌಕರಿಗಾಗಿ ಬೆಂಗಳೂರು, ಮೈಸೂರು ಕಡೆ ಹೋಗಿ ಪರದಾಡಬೇಕಾಗಿಲ್ಲ. ಅವರಿಗೆ ಅದಕ್ಕಿಂತ ಒಳ್ಳೆಯ ನೌಕರಿ ಕಾರ್ಖಾನೆಯವರು ಇಲ್ಲಿಯೇ ಒದಗಿಸಿಕೊಟ್ಟಿದ್ದಾರೆ.
- ನಮ್ಮ ಸಮೀಪದಲ್ಲಿಯೇ ಕಾರ್ಖಾನೆ ಇರುವದರಿಂದ ನಮಗೆ ಕಬ್ಬು ಸಾಗಿಸಲು ತುಂಬಾ ಅನುಕೂಲವಾಗಿದೆ.
- ಆದ್ದರಿಂದ, ಈ ಕಾರ್ಖಾನೆಯ ಸಾಮರ್ಥ್ಯವನ್ನು ಹೆಚ್ಚಿಸಲಿಕೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಜಿಲ್ಲಾಧಿಕಾರಿಯವರಲ್ಲಿ ವಿನಂತಿಸಿಕೊಂಡರು.

5. ಶ್ರೀ ರಾಮಕೃಷ್ಣ. ಮಣ್ಣಿಕೇರಿ, ಚಿಕ್ಕನಂದಿ.

- ಕಾರ್ಖಾನೆ ಪ್ರಾರಂಭವಾದಾಗಿನಿಂದ ನಮ್ಮ ಅಕ್ಕ ಪಕ್ಕದ ಹಳ್ಳಿಗಳಲ್ಲಿ ನಿರುದ್ಯೋಗತನ ತುಂಬಾ ಕಡಿಮೆಯಾಗಿದೆ. ಅದು ಇನ್ನೂ ಕಡಿಮೆಯಾಗಬೇಕೆಂದು ನಾನು ಇಚ್ಛಿಸುತ್ತೇನೆ ಎಂದು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು.

6. ಶ್ರೀ ರಾಯಪ್ಪಾ. ನಾಯಿಕ, ಪಂಚನಾಯ್ಕನಹಟ್ಟಿ.

- ಕಾರ್ಖಾನೆ ನಮ್ಮ ಸಮೀಪದಲ್ಲಿ ಇರುವುದರಿಂದ ನಮಗೆ ತುಂಬಾ ಅನುಕೂಲವಾಗಿದೆ.
- ಕಾರ್ಖಾನೆಯವರು ಸಾವಯವ ಗೊಬ್ಬರವನ್ನು ತುಂಬಾ ಕಡಿಮೆ ದರದಲ್ಲಿ ನಮಗೆ ನೀಡಿ ಸಹಾಯ ಮಾಡುತ್ತಾರೆ. ಇದರಿಂದ ನಮ್ಮ ಬೆಳೆಗಳ ಇಳುವರಿಯನ್ನು ಹೆಚ್ಚಸಲು ನಮಗೆ ಅನುಕೂಲವಾಗಿದೆ.

7. ಶ್ರೀ ಶಿವರಾಯಿ. ದಂಡಿನ, ಮೆಕ್ಕಳಗಿರಿ.

- ಅಕ್ಕ ಪಕ್ಕದ ಊರಿನ ಜನರಿಗೆ ಈ ಕಾರ್ಖಾನೆಯಿಂದ ಹಲವು ರೀತಿಯಲ್ಲಿ ತುಂಬಾ ಅನುಕೂಲವಾಗಿದೆ.
- ನಮ್ಮ ಮಕ್ಕಳಿಗೆ ವಿವಿಧ ರೀತಿಯ ತರಬೇತಿಗಳನ್ನು ಕೊಟ್ಟು, ಅವರಿಗೆ ತಮ್ಮ ಕಾರ್ಖಾನೆಯಲ್ಲಿ ನೌಕರಿಯನ್ನು ನೀಡಿ ಅವರ ಭವಿಷ್ಯದ ಸಲುವಾಗಿ ತುಂಬಾ ಸಹಾಯವನ್ನು ಮಾಡಿದ್ದಾರೆ.

8. ಶ್ರೀ ಮುತ್ತೆಪ್ಪಾ. ಬೀರನಗಡ್ಡಿ, ಬೆಣಚಿನಮರ್ಡಿ.

- ನಮಗೆ ಕಾರ್ಖಾನೆಯಿಂದ ಏನೂ ಅನಾನುಕೂಲಗಳಿಲ್ಲ.
- ಕಾರ್ಖಾನೆಯವರಿಂದ ಸುತ್ತ ಮುತ್ತಲಿನ ಗ್ರಾಮಸ್ಥರಿಗೆ ತುಂಬಾ ಅನುಕೂಲವಾಗಿದೆ.
- ರಸ್ತೆಗಳನ್ನು ನಿರ್ಮಿಸಿದ್ದಾರೆ ಹಾಗೂ ಸುತ್ತ ಮುತ್ತಲಿನ ಪ್ರದೇಶದಲ್ಲಿ ಕಬ್ಬು ಬೆಳೆಯಲು ಪ್ರೋತ್ಸಾಹಿಸುತ್ತಿದ್ದಾರೆ.
- ಈ ಕಾರ್ಖಾನೆ ಆರಂಭವಾದಾಗಿನಿಂದ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ನಿರುದ್ಯೋಗತನ ಕಡಿಮೆಯಾಗಿದೆ.

**9. ಶ್ರೀ ಅಶೋಕ. ನೇಸರಗಿ, ಮಮದಾಪುರ.**

- ನಮಗೆ ಈ ಕಾರ್ಖಾನೆಯಿಂದ ಯಾವುದೇ ಹಾನಿಗಳು ಆಗಿರುವದಿಲ್ಲ, ಬಹಳಷ್ಟು ಲಾಭಗಳಿವೆ.
- ಈ ಕಾರ್ಖಾನೆಯವರು ಸಾವಯವ ಗೊಬ್ಬರವನ್ನು ಪೂರೈಕೆ ಮಾಡಿದ್ದರಿಂದ ಹೆಚ್ಚಿನ ಇಳುವರಿಗೆ ತುಂಬಾ ಅನುಕೂಲವಾಗಿದೆ.

**ಮಾನ್ಯ ಜಿಲ್ಲಾಧಿಕಾರಿಗಳು ಕಾರ್ಖಾನೆಯ ಹತ್ತಿರ ಹರಿಯುತ್ತಿರುವ ಹಳ್ಳದ ನೀರಿನ ಉಪಯೋಗ ಹಾಗೂ ಹಳ್ಳದ ನೀರು ಪಲುಷಿತಗೊಳ್ಳದಂತೆ ಯಾವ ಕ್ರಮಗಳನ್ನು ಕೈಗೊಂಡಿರುವ ಬಗ್ಗೆ ವಿವರ ನೀಡಲು ಸೂಚಿಸಿದರು.**

ಸ್ಪಷ್ಟನೆ: 1. ಅತ್ಯಾಧುನಿಕ ತಾಂತ್ರಿಕ, ತಂತ್ರಜ್ಞಾನವನ್ನು ಬಳಸಿ ತ್ಯಾಜ್ಯ ಸಂಸ್ಕರಣ ಘಟಕವನ್ನು ಸ್ಥಾಪಿಸಿ ಮಲಿನ ನೀರನ್ನು ಶುದ್ಧೀಕರಿಸುತ್ತೇವೆ.

2. ಈ ಶುದ್ಧೀಕರಿಸಿದ ನೀರನ್ನು ನೀರಾವರಿಗಾಗಿ ಹಾಗೂ ಹಸಿರು ಪಟ್ಟಿ ಬೆಳೆಸುವದಕ್ಕೆ ಬಳಸುವದರಿಂದ ಹಳ್ಳದ ನೀರು ಕಷ್ಮಲಗೊಳ್ಳುವ ಪ್ರಮೆಯೇ ಉದ್ಭವಿಸುವದಿಲ್ಲ.

**ಶ್ರೀ ಎನ್ ಜಯರಾಂ ಭಾ.ಆ.ಸೇ., ಜಿಲ್ಲಾಧಿಕಾರಿಗಳು, ಬೆಳಗಾವಿ ಹಾಗೂ ಅಧ್ಯಕ್ಷರು, ಸಭೆಯಲ್ಲಿ ಸಾರ್ವಜನಿಕರು ಕೇಳಿದ ಪ್ರಶ್ನೆಗಳು ಮತ್ತು ಈ ಪ್ರಶ್ನೆಗಳಿಗೆ ಪರಿಸರ ತಜ್ಞರು ನೀಡಿದ ಉತ್ತರಗಳು ಮತ್ತು ಘಟಕದ ಸ್ಥಾಪನೆಯ ಅವಶ್ಯಕತೆ ಮತ್ತು ಘಟಕದ ಸ್ಥಾಪನೆಯಿಂದ ಆಗಬಹುದಾದ ಪರಿಣಾಮಗಳು ಮತ್ತು ಅವುಗಳನ್ನು ತಡೆಗಟ್ಟಲು ಹಾಗೂ ನಿಯಂತ್ರಿಸಲು ಹಾಗೂ ಘಟಕದ ಮಾಲಿಕರು ನೀಡಿದ ಭರವಸೆಗಳನ್ನುಅವಲೋಕಿಸಿ ಈ ಕೆಳಗಿನಂತೆ ಸಲಹೆ ಸೂಚನೆಗಳನ್ನು ನೀಡಿದರು.**

- ಕಾರ್ಖಾನೆಯ ಆವರಣದಲ್ಲಿ ಪ್ರತಿ ವರ್ಷ 10000 ರೂ ದಂತೆ 5 ವರ್ಷ ಸಸಿಗಳನ್ನು ನೆಡಬೇಕೆಂದು ಹಸಿರು ಪಟ್ಟಿಯನ್ನು ನಿರ್ಮಿಸ ಬೇಕು ಅದಕ್ಕಾಗಿ ಸ್ಥಳೀಯ ಗ್ರಾಮ ಪಂಚಾಯತ ಹಾಗೂ ಅರಣ್ಯ ಇಲಾಖೆಯ ಸಹಕಾರವನ್ನು ಪಡೆಯಬಹುದು.
- ಸ್ಥಳೀಯ ಗ್ರಾಮಸ್ಥರ ಸಮಸ್ಯೆಗಳನ್ನು ಆಲಿಸಿ ಅವುಗಳ ಪರಿಹಾರಕ್ಕೆ ತೀವ್ರ ಕ್ರಮ ಕೈಗೋಳುವುದು.
- ವಾಯ್ಯು ಮಾಲಿನ್ಯ, ಶಬ್ದ ಮಾಲಿನ್ಯ ಹಾಗೂ ಧೂಳು ನಿಯಂತ್ರಣಕ್ಕಾಗಿ ಸೂಕ್ತ ಉಪಕರಣಗಳನ್ನು ಅಳವಡಿಸಿ ಸುತ್ತ ಮುತ್ತಲಿನ ಗ್ರಾಮಸ್ಥರ ಹಾಗೂ ಕಾರ್ಮಿಕರ ಆರೋಗ್ಯದ ಮೇಲೆ ಯಾವುದೇ ರೀತಿಯ ದುಷ್ಪರಿಣಾಮವಾಗದಂತೆ ಎಚ್ಚರಿಕೆ ವಹಿಸುವುದು.
- ಮಳೆ ನೀರು ಬಳಕೆಗಾಗಿ ಮಳೆ ನೀರು ಕೋಹ್ಲಿ ಪದ್ದತಿಯನ್ನು ಅಳವಡಿಸಿಕೊಳ್ಳಬೇಕು.
- ಕಾರ್ಖಾನೆಯಲ್ಲಿ ವಿನಾಯಿತಿ ಮೆರೆಗೆ ಸ್ಥಳೀಯ ಗ್ರಾಮಸ್ಥರಿಗೆ ಉದ್ಯೋಗ ಅವಕಾಶಗಳನ್ನು ಒದಗಿಸಲು ಕ್ರಮ ಕೈಗೋಳವುದು.
- ಕಾರ್ಖಾನೆಯ ಸುತ್ತಮುತ್ತಲಿನ ಗ್ರಾಮಸ್ಥರ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದಿಗಾಗಿ ಯೋಜನೆಗಳನ್ನು ಹಮ್ಮಿಕೊಳ್ಳವುದು. ಸುತ್ತಮುತ್ತಲಿನ ಗ್ರಾಮಗಳ ಪ್ರಾಥಮಿಕ ಶಿಕ್ಷಣ, ಆರೋಗ್ಯ ವ್ಯವಸ್ಥೆ, ಕುಡಿಯುವ ನೀರಿನ ಸರಬರಾಜು ಸೇವೆಗಳಿಗೆ ಆದ್ಯತೆ ನೀಡಬೆಕು.

- ಕಾರ್ಖಾನೆಯಿಂದ ಹೋರ ಬರುವ ನೀರನ್ನು ಹಾಗೂ ನಿಯಂತ್ರಣಕ್ಕಾಗಿ ಮುನ್ನ ಎಚ್ಚರಿಕೆ ಕ್ರಮ ಕೈಗೊಳ್ಳವುದು. ಕಲುಷಿತ ನೀರು ಭೂಮಿಯಲ್ಲಿ ಇಂಗಿ ಆ ಪ್ರದೇಶದಲ್ಲಿರುವ ಕೊಳವೆ ಬಾವಿ ಹಾಗೂ ತೆರುವು ಬಾವಿಗಳ ನೀರಿನ ಮೇಲೆ ಪ್ರತಿಕೂಲ ಪರಿಣಾಮ ಆಗದಂತೆ ನೋಡಿಕೊಳ್ಳುವುದು.

ಸಭೆಯಲ್ಲಿ ಕೇಳಲಾದ ಪ್ರಶ್ನೆಗಳು, ಆಕ್ಷಪಣೆಗಳು ಹಾಗೂ ಅವುಗಳಿಗೆ ನೀಡಿದ ಉತ್ತರ ಇವೆಲ್ಲವುಗಳನ್ನು ವಿಡಿಯೋ ರೇಕಾರ್ಡಿಂಗ ಮಾಡಲಾಗಿದ್ದು. ಅದನ್ನು ಸರ್ಕಾರದ ಪರಿಸರ ಹಾಗೂ ಅರಣ್ಯ ಸಚಿವಲಾಯಕ್ಕೆ ಕಳಿಸಲಾಗುವುದೆಂದು ತಿಳಿಸಿದರು ಕಾರಣ ಕಾರ್ಖಾನೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ವಾಸಿಸುವ ಗ್ರಾಮಸ್ಥರ ಹಾಗೂ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರ ಆರೋಗ್ಯದ ಮೇಲೆ ಯಾವುದೇ ರೀತಿಯ ದುಷ್ಪರಿಣಾಮ ವಾಗದಂತೆ ಎಲ್ಲಾ ಅವಶ್ಯಕ ಎಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಅಧ್ಯಕ್ಷರು ಸಭೆಯ ಆಯೋಜಕರಿಗೆ ಕಟ್ಟು ನಿಟ್ಟಿನ ನಿರ್ದೇಶನ ನೀಡಿದರು.ನಂತರ ಸಾರ್ವಜನಿಕ ಅಭಿಪ್ರಾಯವನ್ನು ಆಲಿಸಿ ಸಭೆಗೆ ಉಪಸ್ಥಿತ ಇದ್ದ ಎಲ್ಲಾ ಸಾರ್ವಜನಿಕರು ನಿಯೋಜಿತ ಘಟಕದ ಸ್ಥಾಪನೆಯ ಪರವಾಗಿ ತಮ್ಮ ಅಭಿಪ್ರಾಯವನ್ನು ದಾಖಲಿಸಿಲಾಯಿತು.

ಅಂತಿಮವಾಗಿ ಶೀ ಎಮ್ ಏ ಮನಿಯಾರ, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ-2(ಚಿಕ್ಕೋಡಿ ಕೇಂದ್ರ), ಇವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಗೆ ಹಾಗೂ ಇತರೆ ಇಲಾಖೆಯ ಅಧಿಕಾರಿಗಳಿಗೆ, ನಿಯೋಜಿತ ಘಟಕದ ಸಂಚಾಲಕರಿಗೆ, ಸಿಬ್ಬಂಧಿಗಳಿಗೆ, ಸಾರ್ವಜನಿಕ ಮಾಧ್ಯಮದವರಿಗೆ ಮತ್ತು ಪೋಲಿಸ್ ಸಿಬ್ಬಂಧಿಯವರಿಗೆ ತಮ್ಮ ಮಂಡಳಿ ಪರವಾಗಿ ವಂದನೆಗಳನ್ನು ಸಲ್ಲಿಸಿದರು.

(ಎನ್. ಜಯರಾಮ, ಭಾ. ಆ. ಸೇ)
ಜಿಲ್ಲಾಧಿಕಾರಿಗಳು ಬೆಳಗಾವಿ ಮತ್ತು
ಅಧ್ಯಕ್ಷರು ಸಾರ್ವಜನಿಕ ವಿಚಾರಣಾ
ಸಮೀತಿ ಬೆಳಗಾವಿ, ಕರ್ನಾಟಕ.

21/10